ಮಲೆನಾಡು ಬೋರ್ಡ್‌ಗೆ ಸರ್ಕಾರದವರು ಬಿಡುಗಡೆ ಮಾಡಿರುವ ಹಣ.

70 - ಶ್ರೀ ಶಿವಾನಂದ ಹೆಚ್.ಕೌಜಲಗಿ (ಬೈಲಹೊಂಗಲ) : ಮಾನ್ಯ ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಹುತ್ತು ಮಲೆನಾಡು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) 1991-92, 1992-93 ಮತ್ತು 1993-94ನೇ ಸಾಲುಗಳಲ್ಲಿ ಸರ್ಕಾರದವರು ಮಲೆನಾಡು ಬೋರ್ಡಿಗೆ ಬಿಡುಗಡೆ ಮಾಡಿರುವ ಮೊತ್ತವೆಷ್ಟು?

ಆ) ಮಲೆನಾಡು ಬೋರ್ಡಿನವರು ಪ್ರತಿಯೊಂದು ಜಿಲ್ಲೆಗೆ ಮೇಲ್ಕಂಡ ಸಾಲುಗಳಲ್ಲಿ ಆಯಾಯ ವರ್ಷಗಳಲ್ಲಿ ಬಿಡುಗಡೆ ಮಾಡಿರುವ ಹಣವೆಷ್ಟು? (ವಿವರವಾಗಿ ಕೊಡುವುದಾಗಬೇಕು)

ಇ) ಬೆಳಗಾಂ ಜಿಲ್ಲೆ ಬೈಲಹೊಂಗಲ ಮತಕ್ಷೇತ್ರಕ್ಕೆ ಎಷ್ಟು ಹಣವನ್ನು ಸರಕಾರದವರು ಈಗಾಗಲೇ ಜಿಲ್ಲಾಧಿಕಾರಿಗಳ ಮುಖಾಂತರ ಬಿಡುಗಡೆ ಮಾಡಿರುವುದು ಹಾಗೂ ಆದರಲ್ಲಿ ಎಷ್ಟು ಹಣ ಖರ್ಚಾಗಿರುವುದು?

ಈ) ಟ್ರಜರಿಯಲ್ಲಿ ಚೆಕ್ಕುಗಳು ಕ್ಯಾಶ್ ಆಗದೇ ಇರುವುದರಿಂದ ಕೆಲಸಗಳು ಮಂದಗತಿಯಲ್ಲಿ ನಡೆದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಮಲೆನಾಡು ಬೋರ್ಡಿನವರು ಇನ್ನು ಮುಂದೆ ಚೆಕ್ಕುಗಳನ್ನು ನೇರವಾಗಿ ಜಿಲ್ಲಾಧಿಕಾರಿಗಳಿಗೆ ಕೊಡಲು ವ್ಯವಸ್ಥೆ ಮಾಡಲಾಗುವುದೇ?

ಶ್ರೀ ಎನ್.ಜಿ. ಹಾಲಪ್ಪ (ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು)

ಅ) ಮಂಡಳಿಗೆ ಸರಕಾರವು ಇಲ್ಲಿಯವರೆಗೆ ಬಿಡುಗಡೆ ಮಾಡಿದ ಹಣದ ವಿವರ ಕೆಳಗಿನಿಂತಿದೆ.

ವರ್ಷ	ಕೋಟಿ ರೂ.ಗಳಲ್ಲಿ
1991-92	10
1992-93	-
1993-94	20

ಆ) ಮಲೆನಾಡು ಅಭಿವೃದ್ಧಿ ಮಂಡಳಿಯಿಂದ 1991-92 ಹಾಗೂ 1992-93ರಲ್ಲಿ ಯಾವ ಜಿಲ್ಲೆಗೂ ಹಣ ಬಿಡುಗಡೆ ಮಾಡಿಲ್ಲ. 1993-94ನೇ ಸಾಲಿನಲ್ಲಿ ಬಿಡುಗಡೆ ಮಾಡಿದ ವಿವರ ಕೆಳಗಿನಂತಿದೆ.

ಜಿಲ್ಲೆ		
1. ಬೆಳಗಾಂ	110.00 ಲಕ್ಷ	ರೂ.ಗಳು
2. ಚಿಕ್ಕಮಗಳೂರು	115.00 ಲಕ್ಷ	ರೂ.ಗಳು
3. ಧಾರವಾಡ	105.00 ಲಕ್ಷ	ರೂ.ಗಳು
4. ದಕ್ಷಿಣ ಕನ್ನಡ	155.00 ಲಕ್ಷ	ರೂ.ಗಳು
5. ಹಾಸನ	075.00 ಲಕ್ಷ	ರೂ.ಗಳು
6. ಕೊಡಗು	050.00 ಲಕ್ಷ	ರೂ.ಗಳು
7. ಮೈಸೂರು	090.00 ಲಕ್ಷ	ರೂ.ಗಳು
8. ಶಿವಮೊಗ್ಗ	140.00 ಲಕ್ಷ	ರೂ.ಗಳು
9. ಉತ್ತರ ಕನ್ನಡ	080.00 ಲಕ್ಷ	ರೂ.ಗಳು.
ಒಟ್ಟು	920.00 ಲಕ್ಷ	ರೂ.ಗಳು

ಇ) ಬೆಳಗಾಂ ಜಿಲ್ಲಾಧಿಕಾರಿಗಳು ಬೈಲಹೊಂಗಲ ಮತಕ್ಷೇತ್ರಕ್ಕೆ 12.22 ಲಕ್ಷ ರೂ. ಬಿಡುಗಡೆ ಮಾಡಿರುವರು. ಅದರಲ್ಲಿ 77,250.00ರೂ. ಹಣ ಖರ್ಚು ಮಾಡಲಾಗಿದೆ.

ಈ) ಬಂದಿಲ್ಲ.

ಉ) ಉದ್ಭವಿಸುವುದಿಲ್ಲ

ಚನ್ನಪಟ್ಟಣ ನಗರಕ್ಕೆ ಅಗ್ನಿಶಾಮಕ ಠಾಣೆ ಮಂಜೂರಾತಿ.

73 - ಶ್ರೀ.ಸಾದತ್ ಆಲಿಖಾನ್ (ಚನ್ನಪಟ್ಟಣ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1990ರಲ್ಲಿ ನಡೆದ ಕೋಮು ಗಲಭೆಗಳ ಸಮಯದಲ್ಲಿ ಹಿಂದಿನ ಮುಖ್ಯಮಂತ್ರಿಗಳು ಚನ್ನಪಟ್ಟಣಕ್ಕೆ ಭೇಟಿ ನೀಡಿದಾಗ, ಚನ್ನಪಟ್ಟಣದಲ್ಲಿ ಒಂದು ಅಗ್ನಿ ಶಾಮಕ ಠಾಣೆಯನ್ನು ಮಂಜೂರು ಮಾಡುವುದಾಗಿ ಭರವಸೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಮೇಲಿನ ಪ್ರಸ್ತಾವನೆಯು ಸರ್ಕಾರದಲ್ಲಿ ಮೂರು ವರ್ಷಗಳಿಂದ ಬಾಕಿ ಉಳಿದಿರುವುದು ನಿಜವೇ?

ಇ) ಚನ್ನಪಟ್ಟಣ ಕೃಷಿ ಉತ್ಪನ್ನ ಮಾರುಕಟ್ಟೆಯ ಪ್ರಾಂಗಣದಲ್ಲಿ ಅಗ್ನಿಶಾಮಕ ಠಾಣೆಯನ್ನು ಕಟ್ಟಲು ಜಮೀನನ್ನು ಕಾಯ್ದಿರಿಸಿರುವುದು ನಿಜವೇ? ಹಾಗೂ ಇದನ್ನು ಹಿಂದಿನ ಅಗ್ನಿಶಾಕ ಇಲಾಖೆಯ ಡೈರೆಕ್ಟರ್ ಜನರಲ್ ರವರು ಒಪ್ಪಿದ್ದರೇ?

ಈ) ಇದನ್ನು ಯಾವಾಗ ಮಂಜೂರು ಮಾಡಲಾಗುವುದು ಮತ್ತು ಯಾವಾಗ ನಿರ್ಮಾಣ ಕೆಲಸವನ್ನು ತೆಗೆದುಕೊಳ್ಳಲಾಗುವುದು?

ಶ್ರೀ ಎಂ.ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಕೃಷಿ ಉತ್ಪನ್ನ ಮಾರುಕಟ್ಟೆಯು 24 ಗುಂಟೆ ಜಮೀನನ್ನು ನೀಡುವುದಾಗಿ ತಿಳಿಸಿತ್ತು. ಆದರೆ ಇದು ಅಗ್ನಿ ಶಾಮಕ ಠಾಣೆ ಸ್ಥಾಪನೆಗೆ ಸಾಕಾಗುವುದಿಲ್ಲ. ಮತ್ತು ಸೂಕ್ತವಾಗಿಲ್ಲ.

1991ರಲ್ಲಿ ಸರ್ಕಾರವು ಚನ್ನಪಟ್ಟಣ ಹಾಗೂ ರಾಮನಗರ ಎರಡು ನಗರಗಳಿಗೆ ಸೇವಾ ಸೌಲಭ್ಯ ಒದಗಿಸಲು ಅನುಕೂಲವಾಗುವಂತೆ ಒಂದು ಅಗ್ನಿ ಶಾಮಕ ಠಾಣೆಯನ್ನು ಮಂಜೂರು ಮಾಡಿದೆ. ಸದ್ಯದಲ್ಲಿ ಸದರಿ ಅಗ್ನಿಶಾಮಕ ಠಾಣೆಯು ಚಿನ್ನಪಟ್ಟಣದ ಪೊಲೀಸ್ ತರಬೇತಿ ಶಾಲೆಯಲ್ಲಿ ಒದಗಿಸಲಾದ ತಾತ್ಕಾಲಿಕ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಿದೆ. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು ರಾಮನಗರದ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಎರಡು ಎಕರೆ ಜಮೀನನ್ನು ಒದಗಿಸಿದೆ. ಈ ಜಮೀನು ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸಲು ಸೂಕ್ತವೂ ಮತ್ತು ಸಾಕಷ್ಟಿದ್ದು, ಇದು ಚನ್ನಪಟ್ಟಣ ಮತ್ತು ರಾಮನಗರ ಎರಡೂ ಪಟ್ಟಣಗಳಿಗೆ ಸೇವಾ ಸೌಲಭ್ಯವನ್ನು ಒದಗಿಸುತ್ತದೆ.

ಚನ್ನಪಟ್ಟಣ ಟೌನ್ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಸೀಮೆಎಣ್ಣೆ ಅಭಾವ.

74 - ಶ್ರೀ ಸಾದತ್ ಆಲಿ ಖಾನ್, (ಚನ್ನಪಟ್ಟಣ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚನ್ನಪಟ್ಟಣದ ಟೌನ್ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಒಂದು ವರ್ಷದಿಂದ ಸೀಮೆಎಣ್ಣೆಯ ಅಭಾವ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?